# ಕಬಡ್ಡಿ ವಿಶ್ವಕಪ್‌ನಲ್ಲಿ ವನಿತೆಯರ ಪಾರಮ್ಯ

‘2012ರಲ್ಲಿ ಭಾರತವು ಚೊಚ್ಚಲ ವಿಶ್ವಕಪ್ ಗೆದ್ದಾಗ ನಾನು ತಂಡದಲ್ಲಿರಲಿಲ್ಲ. ಗಾಯದಿಂದಾಗಿ ತಪ್ಪಿಸಿಕೊಂಡಿದ್ದ ಕೊರಗು ಈಗಲೂ ಇದೆ. ಆದರೆ ಮುಖ್ಯ ಕೋಚ್ ಆಗಿ ತಂಡವನ್ನು ವಿಶ್ವಕಪ್ ಗೆಲುವಿನತ್ತ ನಿರ್ದೇಶಿಸಿದ್ದು ಅಪಾರ ಖುಷಿ ತಂದಿದೆ’

ಭಾರತ ಮಹಿಳಾ ಕಬಡ್ಡಿ ತಂಡದ ಮುಖ್ಯ ಕೋಚ್ ತೇಜಸ್ವಿನಿ ಬಾಯಿ ಅವರ ಸಂತಸದ ನುಡಿಗಳಿವು. ಭಾರತ ಮಹಿಳಾ ತಂಡವು ಸತತ 2ನೇ ಬಾರಿ ಕಬಡ್ಡಿ ವಿಶ್ವ ಕಿರೀಟ ಧರಿಸಿತು. 2012ರಲ್ಲಿ ಮೊದಲ ಬಾರಿಗೆ ಟೂರ್ನಿ ನಡೆದಿತ್ತು. ಕಾರಣಾಂತರಗಳಿಂದಾಗಿ 13 ವರ್ಷಗಳ ನಂತರ ಎರಡನೇ ಟೂರ್ನಿ ಢಾಕಾದಲ್ಲಿ ನಡೆಯಿತು. ಥೈವಾನ್ ವಿರುದ್ಧ ಫೈನಲ್‌ನಲ್ಲಿ ಭಾರತ ಜಯಿಸಿತು.

ರಿತು ನೇಗಿ ನಾಯಕತ್ವದಲ್ಲಿ ತಂಡವು ಅಮೋಘವಾಗಿ ಆಡಿತು. ಟೂರ್ನಿಯುದ್ದಕ್ಕೂ ಬಿಗಿಹಿಡಿತ ಸಾಧಿಸಿತ್ತು. ಬೆಂಗಳೂರಿನ ತೇಜಸ್ವಿನಿ ಅವರು 20 ವರ್ಷಗಳ ಕಾಲ ರಾಜ್ಯ ಮತ್ತು ರಾಷ್ಟ್ರ ತಂಡದಲ್ಲಿ ಆಡಿದವರು. ಅಲ್ಲದೇ ಭಾರತ ಮಹಿಳಾ ಕಬಡ್ಡಿ ತಂಡದ ನಾಯಕಿಯಾಗಿದ್ದವರು. ಕಳೆದ ಐದು ವರ್ಷಗಳಿಂದ ಕೋಚ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ.

2023ರಲ್ಲಿ ಚೀನಾದಲ್ಲಿ ನಡೆದಿದ್ದ ಏಷ್ಯನ್ ಗೇಮ್ಸ್‌ನಲ್ಲಿ ಭಾರತ ಚಿನ್ನ ಗೆದ್ದಿತು. ಹೋದ ವರ್ಷ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿಯೂ ಚಿನ್ನದ ಸಾಧನೆ ಮಾಡಿತು.

‘ಛತ್ತೀಸಘಡದ ಸಂಜು ದೇವಿ, ಪುಷ್ಪಾ, ಪೂಜಾ ಅತ್ವಾಲ್, ಸೋನಾಲಿ ಸಿಂಗ್, ಮಂಗಳೂರಿನ ಧನಲಕ್ಷ್ಮೀ ಸೇರಿದಂತೆ ತಂಡದ ಎಲ್ಲ ಆಟಗಾರ್ತಿಯರೂ ಚೆನ್ನಾಗಿ ಆಡಿದರು. ಇದರಲ್ಲಿ ಆರು ಜನ ರೈಲ್ವೆಯಲ್ಲಿ ಉದ್ಯೋಗಿಗಳಾಗಿದ್ದಾರೆ. ಇನ್ನೂ ಕೆಲವರು ಉತ್ತರಪ್ರದೇಶ ಪೊಲೀಸ್ ಇಲಾಖೆಯಲ್ಲಿದ್ದಾರೆ. ಕೆಲವರು ಭಾರತ ಕ್ರೀಡಾ ಪ್ರಾಧಿಕಾರದ ವಿದ್ಯಾರ್ಥಿಗಳಾಗಿದ್ದಾರೆ’ ಎಂದು ತೇಜಸ್ವಿನಿ ತಮ್ಮ ತಂಡದ ಕುರಿತು ಹೇಳುತ್ತಾರೆ.

ತೇಜಸ್ವಿನಿ ಅವರು ಕೋಚ್ ಆದ ನಂತರ ತಂಡವು ಹಲವು ಟೂರ್ನಿಗಳಲ್ಲಿ ಯಶಸ್ಸು ಸಾಧಿಸುತ್ತಿದೆ.

‘ತಾಂತ್ರಿಕ ಕೌಶಲಗಳನ್ನು ಹೇಳಿಕೊಡುವುದಕ್ಕೆ ನಮ್ಮ ಆದ್ಯತೆ. ಆಟಗಾರ್ತಿಯರ ಆಯ್ಕೆಯನ್ನು ಅರ್ಹತೆಯ ಆಧಾರದಲ್ಲಿ ಮಾಡುತ್ತೇವೆ. ಅದಕ್ಕೆ ತಕ್ಕಂತೆ ಫಿಟ್‌ನೆಸ್, ಸ್ಟ್ರೆಂತ್ ಮತ್ತು ಕಂಡಿಷನಿಂಗ್ ಸಿಬ್ಬಂದಿಯೂ ಕಾರ್ಯನಿರ್ವಹಿಸುತ್ತಾರೆ. ಮಾನಸಿಕ ಸಬಲತೆಗಾಗಿ ತರಗತಿಗಳೂ ಇರುತ್ತವೆ. ಯೋಗ ಹೇಳಿಕೊಡಲಾಗುತ್ತದೆ. ಇದರಿಂದಾಗಿ ಹುಡುಗಿಯರು ಆತ್ಮವಿಶ್ವಾಸದಿಂದ ಆಡುತ್ತಾರೆ’ ಎಂದು ತರಬೇತಿಯ ರೂಪುರೇಷೆಯನ್ನು ವಿವರಿಸಿದರು.

ಕರ್ನಾಟಕದಿಂದ ಬರುತ್ತಿರುವ ಆಟಗಾರ್ತಿಯರ ಸಂಖ್ಯೆ ಕಡಿಮೆ ಇದೆ ಎಂಬ ಬೇಸರ ಅವರಿಗೆ ಇದೆ. ಹರಿಯಾಣ, ಹಿಮಾಚಲಪ್ರದೇಶ, ಪಂಜಾಬ್, ಉತ್ತರಪ್ರದೇಶಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಹುಡುಗಿಯರು ಕಬಡ್ಡಿಯತ್ತ ಬರುತ್ತಿದ್ದಾರೆ. ಆದರೆ ಕರ್ನಾಟಕದಲ್ಲಿ ಇತ್ತೀಚೆಗೆ ಕಡಿಮೆಯಾಗಿದೆ. ತಾವು ಆಡುವಾಗ ಸೌಲಭ್ಯಗಳ ಕೊರತೆ ಇತ್ತು. ಈಗ ಉತ್ತಮ ಸೌಲಭ್ಯಗಳಿದ್ದರೂ ಬರುತ್ತಿಲ್ಲ ಎಂಬ ಕೊರಗು ಅವರಿಗೆ ಇದೆ.

‘ಕರ್ನಾಟಕದಲ್ಲಿ ಅದರಲ್ಲೂ ಬೆಂಗಳೂರಿನಲ್ಲಿ ಮಹಿಳೆಯರಿಗಾಗಿ ಕಬಡ್ಡಿ ಕ್ಲಬ್‌ಗಳು ಕಡಿಮೆ ಇವೆ. ಮಂಗಳೂರು, ಉತ್ತರ ಕರ್ನಾಟಕದಲ್ಲಿ ಕೆಲವು ಸಂಸ್ಥೆಗಳು ಮಾತ್ರ ಕಾರ್ಯನಿರ್ವಹಿಸುತ್ತಿವೆ. ಪುರುಷರಿಗಾಗಿ ಕ್ಲಬ್‌ಗಳು ಉತ್ತಮವಾಗಿವೆ. ಪ್ರೊ ಕಬಡ್ಡಿ ಕೂಡ ಇರುವುದರಿಂದ ಉತ್ತೇಜನ ಸಿಗುತ್ತದೆ. ಮಹಿಳೆಯರಿಗೂ ಅಂತಹ ಸೌಲಭ್ಯಗಳು ಹೆಚ್ಚಬೇಕು’ ಎಂದು ತೇಜಸ್ವಿನಿ ಹೇಳುತ್ತಾರೆ.

> ವೃತ್ತಿಪರ ಪುರುಷರು ಸ್ಪರ್ಧಿಸಿದ್ದ ಈ ಟೂರ್ನಿಯಲ್ಲಿ ಆಡಿದ್ದು ಉತ್ತಮ ಅನುಭವ. ನನ್ನ ಸಾಮರ್ಥ್ಯದ ಮಟ್ಟವನ್ನು ಅರಿಯಲು ಇಲ್ಲಿ ಸಾಧ್ಯವಾಯಿತು. ಪ್ರಶಸ್ತಿ ಗೆದ್ದಿರುವುದು ಅದ್ಭುತ ಅನುಭವ. ಮುಂದಿನ ಸಾಧನೆಗಳಿಗೆ ಸ್ಫೂರ್ತಿ.
>
> **-ಪ್ರಣವಿ ಅರಸ್**
> ಗಾಲ್ಫ್ ಆಟಗಾರ್ತಿ



ಮನೆಯವರೆಲ್ಲರೂ ಬುದ್ಧಿ ಹೇಳಿದ್ದರು. ಇನ್ನಷ್ಟು ಜನ ‘ಇದು ಹೆಣ್ಮಕ್ಕಳಿಗಲ್ಲ’ ಎಂದು ವ್ಯಂಗ್ಯವಾಡಿದ್ದರು.

ಆದರೆ ಆಕೆಯನ್ನು ತಡೆಯಲು ಯಾರಿಗೂ ಸಾಧ್ಯವಾಗಲಿಲ್ಲ. ಕೆಲವು ತಿಂಗಳುಗಳ ಹಿಂದಷ್ಟೇ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದು ಬಂದಿದ್ದ ಮೀನಾಕ್ಷಿ, ಈಚೆಗೆ ಗ್ರೇಟರ್ ನೋಯಿಡಾದಲ್ಲಿ ನಡೆದ ವಿಶ್ವಕಪ್ ಬಾಕ್ಸಿಂಗ್‌ನಲ್ಲಿಯೂ ತಮ್ಮ ಸಾಮರ್ಥ್ಯ ಮೆರೆದರು. ಏಷ್ಯಾದ ಹಾಲಿ ಚಾಂಪಿಯನ್ ಫರ್ಜೋನಾ ಫೋಝಿಲೊವಾ ಅವರನ್ನು ಫೈನಲ್‌ನಲ್ಲಿ 5–0ಯಿಂದ ಸೋಲಿಸಿದ ಮೀನಾಕ್ಷಿ ಚಿನ್ನ ಗೆದ್ದರು.

**ಗಣಿತ ಪ್ರವೀಣೆ ಅರುಂಧತಿ:** ರಾಜಸ್ಥಾನದ ಕೋಟಾ ಎಂದರೆ ಐಐಟಿ (ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ), ನೀಟ್ (ವೈದ್ಯಕೀಯ ಕೋರ್ಸ್ ಪ್ರವೇಶ ಪರೀಕ್ಷೆ) ಕೋಚಿಂಗ್ ಕೇಂದ್ರಗಳ ಕಣಜ. ಪ್ರತಿವರ್ಷ ನೂರಾರು ವಿದ್ಯಾರ್ಥಿಗಳಿಗೆ ಐಐಟಿ, ನೀಟ್ ಪ್ರವೇಶ ಪರೀಕ್ಷೆಗಳಿಗೆ ತರಬೇತಿ ನೀಡುವ ಹಲವು ಅಕಾಡೆಮಿಗಳು ಇಲ್ಲಿವೆ. ಇದೇ ಊರಿನಲ್ಲಿ ಜನಿಸಿದ ಅರುಂಧತಿ ಚೌಧರಿಯನ್ನೂ ಐಐಟಿ ಎಂಜಿನಿಯರ್ ಮಾಡಬೇಕೆಂಬ ಆಸೆ ಆಕೆಯ ಪಾಲಕರಿಗಿತ್ತು. ಅರುಂಧತಿ ಕೂಡ ಗಣಿತ ವಿಷಯದಲ್ಲಿ ಬಹಳ ಜಾಣೆಯಾಗಿದ್ದರು. ಆದರೂ ಐಐಟಿಗಿಂತಲೂ ಬಾಕ್ಸಿಂಗ್ ರಿಂಗ್‌ನತ್ತಲೇ ಅವರು ಒಲವು ತೋರಿದರು. ಮೊದಲಿಗೆ ಬ್ಯಾಸ್ಕೆಟ್‌ಬಾಲ್ ಆಟಗಾರ್ತಿಯಾಗಿದ್ದ ಅರುಂಧತಿ ನಂತರ ಬಾಕ್ಸಿಂಗ್ ಆಯ್ಕೆ ಮಾಡಿಕೊಂಡರು. ‘ಆಟ ಬಿಟ್ಟು ಐಐಟಿ ಕಡೆ ಗಮನ ನೀಡು’ ಎಂಬ ಅಪ್ಪನ ಒತ್ತಾಯದ ನಡುವೆಯೂ ಅರುಂಧತಿ ಕೈಗವಸು ಧರಿಸಿದರು.



ಅರುಂಧತಿ ಚೌಧರಿ

ಕೋಚ್ ಗೌತಮ್ ಅವರು ಅರುಂಧತಿಗೆ ತರಬೇತಿ ನೀಡಿದರು. ಇದೀಗ ಗ್ರೇಟರ್ ನೋಯಿಡಾದಲ್ಲಿ ನಡೆದ ವಿಶ್ವಕಪ್ ಟೂರ್ನಿಯಲ್ಲಿ 70 ಕೆ.ಜಿ. ವಿಭಾಗದಲ್ಲಿ ಚಿನ್ನ ಗೆದ್ದಿದ್ದಾರೆ. ಫೈನಲ್‌ನಲ್ಲಿ ಉಜ್ಬೇಕಿಸ್ತಾನದ ಅಝೀಜಾ ಝೋಕಿರೊವಾ ಅವರನ್ನು ಸೋಲಿಸಿದರು. ಈ ಹಿಂದೆ ಅರುಂಧತಿ ಯುವ ವಿಶ್ವ ಚಾಂಪಿಯನ್ ಕೂಡ ಆಗಿದ್ದರು.

**ಪ್ರೀತಿಗೆ ಚಿಕ್ಕಪ್ಪನ ಪ್ರೇರಣೆ:** ಒಲಿಂಪಿಯನ್ ಪ್ರೀತಿ ಅವರ ತಂದೆ ಪೊಲೀಸ್ ಅಧಿಕಾರಿ. ಚಿಕ್ಕಪ್ಪ ವಿನೋದ್ ಬಾಕ್ಸರ್ ಆಗಿದ್ದವರು. ಚಿಕ್ಕಪ್ಪನ ಪ್ರೇರಣೆಯಿಂದ 14ನೇ ವಯಸ್ಸಿಗೇ ಬಾಕ್ಸಿಂಗ್‌ನಲ್ಲಿ ಆಸಕ್ತಿ ಬೆಳೆಸಿಕೊಂಡ ಪ್ರೀತಿ, ಹರಿಯಾಣದ ಭಿವಾನಿಯವರು. ಏಷ್ಯನ್ ಚಾಂಪಿಯನ್ ಕೂಡ ಆಗಿದ್ದಾರೆ. ವಿಶ್ವಕಪ್ ಟೂರ್ನಿಯ 54 ಕೆ.ಜಿ. ವಿಭಾಗದಲ್ಲಿ ವಿಶ್ವ ಚಾಂಪಿಯನ್, ಇಟಲಿಯ ಶಿರಿನ್ ಶೇರಾಬಿ ವಿರುದ್ಧ ಗೆದ್ದು ಚಿನ್ನ ಪಡೆದರು.

**ಲಯಕ್ಕೆ ಮರಳಿದ ನಿಖತ್:** ಮೇರಿ ಕೋಮ್ ನಂತರ ಭಾರತದ ಬಾಕ್ಸಿಂಗ್



ನಿಖತ್ ಜರೀನ್